ಮುಖ್ಯಭಾಷಣಕಾರರು ಧ್ವನಿವರ್ಧಕ ಹಿಡಿದು ಸಭಿಕರನ್ನು ಹೀಗೆ ಕೇಳುತ್ತಿದ್ದರು.
ಮುಖ್ಯಭಾಷಣಕಾರ: ಏನೂ ಸಮಸ್ಯೆ ಇಲ್ಲವಲ್ಲ, ಎಲ್ಲರಿಗೂ ನನ್ನ ಮಾತು ಕೇಳಿಸುತ್ತಿದೆ ತಾನೆ?
'ಸಮಸ್ಯೆ ಇದೆ ಸಾರ್' ಎನ್ನುವ ಸ್ವರ ಹಿಂಬದಿ ಸಾಲಿನಿಂದ ಹೊರಟಿತ್ತು.
ಮುಖ್ಯಭಾಷಣಕಾರ: ಹೇಳಿ, ಏನು ಸಮಸ್ಯೆ?
ಸಭಿಕರು: ಅದೇ ಸಾರ್, ನಿಮ್ಮ ಮಾತು ಕೇಳುತ್ತಿರುವುದು.

ಕಡಲೆಕಾಯಿ ಪರಿಷೆಯಲ್ಲಿ ಐದು ವರ್ಷದ ಪೋರ ಪಾಪ್‌ಕಾರ್ನ್ ಪೊಟ್ಟಣ ಹಿಡಿದು ಅಡ್ಡಾಡುತ್ತಿದ್ದ. ಅವನು ಒಬ್ಬ ಹಣ್ಣು ಮುದುಕನ ಬಳಿ ಬಂದು, 'ತಾತ, ನಿಂಗೆ ಪಾಪ್‌ಕಾರ್ನ್ ಅಂದ್ರೆ ಇಷ್ಟನಾ' ಎಂದು ಕೇಳಿದ. ಮುದುಕ, 'ಅಯ್ಯೊ ಮಗು... ನಂಗೆ ಹಲ್ಲಿಲ್ಲಪ್ಪ' ಎಂದರು. ಖುಷಿಗೊಂಡ ಪೋರ, 'ಹಾಗಾದರೆ ಈ ಪೊಟ್ಟಣ ಇಟ್ಕೊಂಡಿರು, ಈಗಲೇ ಬಂದೆ' ಎಂದು ಪ್ಯಾಂಟ್ ಜಿಪ್ ಬಿಚ್ಚುತ್ತ ಪೊದೆಯತ್ತ ಓಡಿದ.

ರೈಲಿನಲ್ಲಿ ಒಬ್ಬ ಜಾದೂಗಾರ ಮಕ್ಕಳನ್ನು ರಂಜಿಸುತ್ತಿದ್ದ. ಚೆಂಡು ಎಸೆದು ಬೋಗಿಯಿಂದ ಒಗೆದವನಂತೆ ನಟಿಸುತ್ತಿದ್ದ. ಆ ಚೆಂಡು ಅವನ ಹಿಂಬದಿಯಲ್ಲೇ ಇರುತ್ತಿತ್ತು. ಕಣ್ಣು ಕಟ್ಟು ಮಾಡಿ ಮತ್ತೆ ಅದೇ ಚೆಂಡನ್ನು ತೋರಿಸುತ್ತಿದ್ದ. ಒಂದು ಮಗು ನಾನೂ ಹಾಗೆ ಮಾಡಲಾ ಅಂದಿತು. ಆಗಲಿ ಅಂದ ಜಾದೂಗಾರ. ಮಗು ಚೆಂಡನ್ನು ನಿಜಕ್ಕೂ ಬೋಗಿಯಿಂದ ಎಸೆದಿತ್ತು. 'ಎಲ್ಲಿ ತಾ ನೋಡೋಣ ಮತ್ತೆ ಚೆಂಡು' ಅಂದ ಜಾದೂಗಾರ. ಅದಕ್ಕೆ ಆ ಮಗು 'ಸಾರಿ, ನಂಗೆ ಅರ್ಥ ಮ್ಯಾಜಿಕ್ಕೇ ಬರೋದು' ಅಂದಿತು.

ನವಿಲಳ್ಳಿಯಲ್ಲಿ ಒಂದು ಹೋಟೆಲ್‌ನಲ್ಲಿ ನೇತುಹಾಕಿದ್ದ ಬೋರ್ಡ್‌ನಲ್ಲಿ, 'ದೋಸೆಗೆ ಎರಡನೇ ಬಾರಿ ಚಟ್ನಿ ಕೊಡುವುದಿಲ್ಲ' ಎಂದು ಬರೆಯಲಾಗಿತ್ತು. ಅದನ್ನು ಓದಿದ ಗ್ರಾಹಕರೊಬ್ಬರು, 'ಹಾಗಾದರೆ ಮೂರನೆಯ ಬಾರಿ ಚಟ್ನಿ ಕೊಡುತ್ತೀರಾ' ಎಂದು ಪ್ರಶ್ನಿಸಿದ.

ಕುತ್ತಿಗೆ ಮೇಲೆ 'ಮೇಕಪ್' ಮಾಡ್ಕೊಂಡ್ರೆ ಸಾಕು. 'ಡ್ರೆಸ್' ಖರ್ಚಿನ ಉಳಿತಾಯ!

ರಘುನಾಥ ರಾವ್ ಮಧ್ಯಾಹ್ನ ಮನೆಗೆ ಊಟಕ್ಕೆ ಹೋಗಬೇಕಾದವರು ಹನ್ನೊಂದು ಗಂಟೆಗೇನೆ ಆಫೀಸಿನಿಂದ ಹೊರಟಿದ್ದರು...
ಸಹೋದ್ಯೋಗಿ ಶಂಕರಪ್ಪ: ಇಷ್ಟು ಬೇಗ ಹಸಿವಾಯಿತೆ?
ರಘುನಾಥ ರಾವ್: ಅಲ್ಲ, ಸ್ವಲ್ಪವೂ ವ್ಯರ್ಥ ಮಾಡಬೇಡ ಅಂತ ಸುಣ್ಣ ಹೊಡೆಯುವ ರಂಗಯ್ಯನಿಗೆ ಹೇಳಿದ್ದೆ. ಸುಣ್ಣ ಉಳಿಯಿತೆಂದು, ಎಲ್ಲಾದರೂ ಕಾರಿಗೂ ಹೊಡೆದಾನೊ ಅಂತ ಭಯವಾಗ್ತಿದೆ.

ಒಂದು ಲಕೋಟೆ ಕೊಟ್ಟು ಅಂಚೆ ಡಬ್ಬಕ್ಕೆ ಹಾಕಿ ಬಾ ಅಂತ ಶಾಮಣ್ಣನವರು ತಮ್ಮ ಮೊಮ್ಮಗ ಆರವ್‌ಗೆ ಹೇಳಿದ್ದೆ ತಪ್ಪಾಯಿತು. ಹತ್ತು ನಿಮಿಷಗಳಲ್ಲಿ ಆರವ್ ಲಕೋಟೆಯೊಂದಿಗೆ ವಾಪಸ್ಸಾಗಿದ್ದ. ಅದನ್ನು ಕಂಡ ಶಾಮಣ್ಣ, 'ಇದೇನೊ ಇದು, ಅಂಚೆ ಡಬ್ಬ ಎಲ್ಲಿ ಅಂತ ಗೊತ್ತಾಗಲಿಲ್ವ' ಎಂದು ಕೇಳಿದರು. 'ತಾತ, ಡಬ್ಬ ಬೀಗ ಹಾಕಿತ್ತು' ಅನ್ನುವುದೇ ಪುಟಾಣಿ?

ಬಾಡಿಗೆಗೆ ಮನೆ ನೋಡುತ್ತಿದ್ದ ತಮ್ಮಣ್ಣ ಮನೆಯ ಮಾಲೀಕನನ್ನು ವಿಚಾರಿಸಿದರು...
ತಮ್ಮಣ್ಣ: ಸೂರು ಪರ್ವಾಗಿಲ್ವ ಸಾರ್, ನೀರು ಸೋರಲ್ವ?
ತುಸು ಯೋಚಿಸಿದ ಮಾಲೀಕ ಹೇಳಿದ್ದೇನು ಗೊತ್ತೇ?
ಮಾಲೀಕ: ಖಂಡಿತ ಇಲ್ಲ ಇವರೆ, ಮಳೆ ಬಂದಾಗ ಮಾತ್ರ ಸೋರುತ್ತೆ.

'ಟೆಡ್ಡಿಬೇರ್‌ನ ಹೊಟ್ಟೆ ಯಾವಾಗಲೂ ತುಂಬಿರುವ ಅರ್ಥವೇನು' ಎಂದು ಒಬ್ಬ ಗಿರಾಕಿ ಅಂಗಡಿಯವನನ್ನು ಕೇಳಿದ. ಅದಕ್ಕೆ ಆತ, 'ನಿಮ್ಮಂಥವರು ಟೆಡ್ಡಿಬೇರ್‌ನ ಪದೇ ಪದೇ ತೆಗೆದುಕೊಂಡು ನನ್ನ ಜೇಬನ್ನೂ ಹೀಗೆ ತುಂಬಿಸಲಿ ಎನ್ನುವುದೇ ಅದರ ಅರ್ಥ' ಎಂದ.

ಮದುವೆ ಮನೆಯಲ್ಲಿ ಹೀಗೊಂದು ಸಂಭಾಷಣೆ...
ಗುಂಡ: ಮೊನ್ನೆ ನಾನು ನಿಮ್ಮ ಮನೆ ಹತ್ತಿರ ಬಂದಿದ್ದೆ ಸಾರ್!
ಮಂಡ: ಹೌದಾ?
ಗುಂಡ: ಅಷ್ಟು ಹತ್ತಿರ ಬಂದ್ರೂ ಸಿಕ್ದೆ ಹೋಯ್ತಲ್ಲ ನಿಮ್ಮನೆ.
ಮಂಡ: ಹೋಗ್ಲಿ ಬಿಡಿ, ಒಳ್ಳೇದೇ ಆಯ್ತು!

1980ರ ಸಮಯ. ಬೆಂಗಳೂರಿಗೆ ಟೀವಿ ಬಂದ ಹೊಸದು. ತಮ್ಮ ಮನೆಗೆ ಟೀವಿ ಬಂತು ಅನ್ನೋ ಜಂಬದಿಂದ ತಿಮ್ಮ ಆಫೀಸಿನಲ್ಲಿ ತನ್ನ ಬಾಸ್‌ಗೆ, 'ಸಾರ್, ನಿನ್ನೆ ಮನೆಯಲ್ಲಿ ಚಂಪಾಂಜಿ ನೋಡಿದೆ' ಅಂತ ರೈಲು ಬಿಟ್ಟ. ಬಾಸ್‌ಗೆ ತಿಮ್ಮನ ಮಾತಿನ ಮರ್ಮ ಅರ್ಥವಾಯಿತು. 'ಹೌದಾ?, ನಿಮ್ಮ ಮನೇಲಿ ದೊಡ್ಡ ಕನ್ನಡಿನೂ ಉಂಟು ಅಂತಾಯ್ತು' ಎಂದ.

ರಾಮಯ್ಯ: (ಗೇಟು ತೆರೆದು ಒಳಬರುತ್ತ...) ನಾಯಿ ಇದ್ಯ?
ಲಕ್ಷ್ಮಯ್ಯ: ಇದೆ ಇವರೆ.
ರಾಮಯ್ಯ: (ರಾಮಯ್ಯ ಸ್ವಲ್ಪವೂ ವಿಚಲಿತರಾಗದೆ...) ಪರವಾಗಿಲ್ಲ ಬಿಡಿ ನೀವೂ ಇದೀರಲ್ಲ!

ರೋಗಿಯೊಬ್ಬ ಇನ್ನೇನು ಆಪರೇಷನ್ನಿಗೆ ಒ.ಟಿ. ಪ್ರವೇಶಿಸುವುದರಲ್ಲಿದ್ದ. ದಿಢೀರನೆ ಎದ್ದು ಕುಳಿತ ಆತ, 'ನಂಗೆ ಬಹಳ ಭಯವಾಗ್ತಿದೆ' ಎಂದು ತನ್ನ ಮಿತ್ರನಿಗೆ ಹೇಳಿದ. ಅದಕ್ಕೆ ಮಿತ್ರ, 'ಇದು ಸರಳ ಆಪರೇಷನ್ ಅಂತ ಹೇಳ್ತಿದ್ದರು ಅಂದ್ರಲ್ಲ ಈಗ್ತಾನೆ?'. ರೋಗಿ, 'ಹೌದು ಮಾರಾಯರೆ, ನರ್ಸ್ ಡಾಕ್ಟರ್‌ಗೆ ಹಾಗೆ ಹೇಳ್ತಿದ್ದದ್ದನ್ನು ನಾನು ಈಗಷ್ಟೇ ಕೇಳಿಸಿಕೊಂಡೆ. ಅದಕ್ಕೆ ಭಯ ಆಗ್ತಿದೆ' ಎಂದ.

ಸಂಗ್ರಹ: ಬಿಂಡಿಗನವಿಲೆ ಭಗವಾನ್,
ಬೆಂಗಳೂರು